ವರ್ಷ ತಂದೆ ರಹಮತ್ ಖಾನ್‌ಗೆ ನೇಪಾಳದ ಮಹಾರಾಜರಿಂದ ಆಹ್ವಾನ ಬಂತು. ತಂದೆ ಮಗ ಇಬ್ಬರೂ ನೇಪಾಳಕ್ಕೆ ಹೋದರು. ಅಪ್ಪ ಸಂಗೀತ ಕಲಿಸುತ್ತಿದ್ದರೆ, ಮಗ ಹಿಮಾಲಯದ ತಪ್ಪಲಿನಲ್ಲಿ ಓಡಾಡುತ್ತಾ, ಧ್ಯಾನಸ್ಥರಾಗಿದ್ದ ಋಷಿಮುನಿಗಳನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದರು. ಇನಾಯತ್ ಖಾನ್‌ರ ಮುಂದಿನ ಪಯಣ ನ್ಯೂಯಾರ್ಕ್‌ಗೆ. ನ್ಯೂಯಾರ್ಕ್‌ಗೆ ಹೋದ ಇನಾಯತ್ ಖಾನ್ ಮದುವೆಯಾದದ್ದು ಅಮೆರಿಕದ ಹೆಣ್ಣು ಮಗಳು ಓರಾರೇ ಬೇಕರ್ ಅವರನ್ನು. ಈ ದಂಪತಿಗೆ ಜನಿಸಿದ ತ್ರಿಲೋಕ ಸುಂದರಿಯೇ ನೂರ್ ಇನಾಯತ್ ಖಾನ್. ಲಂಡನ್‌ನಲ್ಲಿ ಸಂಗೀತದ ಪಾಠ ಹೇಳುತ್ತಾ, ಕಛೇರಿಗಳನ್ನು ನೀಡುತ್ತಾ ಜೀವನ ನಡೆಸುತ್ತಿದ್ದರು. ಈ ಸಂದರ್ಭದಲ್ಲೇ ಇನಾಯತ್ ಖಾನ್ ಮಹಾತ್ಮ ಗಾಂಧಿ, ಸರೋಜಿನಿ ನಾಯ್ಡು, ರವೀಂದ್ರನಾಥ್ ಟ್ಯಾಗೋರ್ ಮೊದಲಾದವರನ್ನು ಭೇಟಿಯಾದರು. 1913ರಲ್ಲಿ ಇಡೀ ಕುಟುಂಬ ರಷ್ಯಾಕ್ಕೆ ತೆರಳಿತು. ಅಲ್ಲಿ ಹುಟ್ಟಿದವಳು ಈ ತ್ರಿಲೋಕ ಸುಂದರಿ ನೂರ್ ಇನಾಯತ್ ಖಾನ್ (1 ಜನವರಿ 1914). ಆ ಮಗುವಿಗೆ ಇವರು ಇಟ್ಟ ಹೆಸರು ನೂರ್ ಇನ್ನೀಸಾ, ಎಂದರೆ ಉರ್ದುವಿನಲ್ಲಿ ಸ್ತ್ರೀಕುಲದ ಬೆಳಕು.

ಈ ಇಡೀ ಕುಟುಂಬ ಕೊನೆಗೆ ನೆಲೆಯಾದದ್ದು ಪ್ಯಾರೀಸ್‌ನ ಒಂದು ಹಳ್ಳಿಯಲ್ಲಿ. ಇನಾಯತ್ ಖಾನ್‌ರ ಪರಮ ಶಿಷ್ಯೆಯೊಬ್ಬರು ಈ ಕುಟುಂಬಕ್ಕೆ ಕೊಟ್ಟ ಅಪೂರ್ವ ಸುಂದರ ಮನೆಯಲ್ಲಿ. ಈ ಮನೆ ಈಗಲೂ ಫಜಲ್ ಮಂದಿರ್ ಎಂದೇ ಖ್ಯಾತವಾಗಿದೆ. ಅಂತರ್ ಧರ್ಮೀಯ ಈ ಕುಟುಂಬ ಸರ್ವಧರ್ಮದ ಸಂಕೇತದಂತಿತ್ತು. ಪ್ರತಿದಿನ ಸಂಜೆ ಅವರ ಮನೆಯಲ್ಲಿ ಹಚ್ಚುತ್ತಿದ್ದ ದೀಪವು ಹಿಂದೂ, ಬೌದ್ಧ, ಝುರಾಷ್ಟ್ರಿಯನ್, ಯಹೂದಿ, ಕ್ರೈಸ್ತ ಮತ್ತು ಇಸ್ಲಾಂ ಮತಗಳನ್ನು ಪ್ರತಿನಿಧಿಸುವ ಪವಿತ್ರ ದೀಪವನ್ನು ಹಚ್ಚುವ ಮೂಲಕ ಆ ಸರ್ವಶಕ್ತ ದೇವನನ್ನು ಭಜಿಸುತ್ತಿದ್ದೇವೆ ಎಂದು ಪ್ರಾರ್ಥಿಸಲಾಗುತ್ತಿತ್ತು. ಆ ಫಜ಼ಲ್ ಮಂದಿರ್‌ನಲ್ಲಿ ಎಲ್ಲಾ ಕಲೆಗಳೂ, ಎಲ್ಲಾ ವಾಕ್ಯಗಳೂ, ಎಲ್ಲಾ ಧರ್ಮಗಳೂ, ಪ್ರೀತಿ ಮತ್ತು ಶಾಂತಿಯಿಂದ ಬದುಕುವ ಆಶಯವನ್ನು ಎತ್ತಿ ಹಿಡಿಯುತ್ತಿದ್ದವು. ಇಂತಹ ವಾತಾವರಣದಲ್ಲಿ ಬೆಳೆದ ನೂರ್ ಇನಾಯತ್ ಖಾನ್ ಸಹಜವಾಗಿಯೇ ವಿಶ್ವಮಾನವಳಾಗಿ ಬೆಳೆದಳು. ಜಾತಿ ಧರ್ಮಗಳ ಬೇಲಿ ಮತ್ತು ಮೈಲಿಗೆ ಅವಳನ್ನು ಎಂದೂ ಸೋಂಕಲಿಲ್ಲ. ಇದರ ಜೊತೆಗೆ ಅವಳ ಅಸಾಧಾರಣ ಪ್ರತಿಭೆಯೂ ಸೇರಿ ಅವಳ ವ್ಯಕ್ತಿತ್ವ ಅರಳ ತೊಡಗಿತು. ಆದರೆ ಬದುಕು ಯಾವಾಗ ಸರಳ ದಾರಿಯನ್ನು ಬಿಟ್ಟು ಹಳಿ ತಪ್ಪಿ ಹೋಗುತ್ತದೆಂದು ಯಾರು ಹೇಳಬಲ್ಲರು? ಪ್ಯಾರೀಸ್‌ನಲ್ಲಿ ಹೀಗೊಂದು ಆಶೀರ್ವಾದದ ಮನೆಯನ್ನು ಕಟ್ಟಿ ಸಂಗೀತದ ಸರ್ವಧರ್ಮದ ಭಾಷೆಯನ್ನು ಜಾಗತಿಕ ಭಾಷೆಯನ್ನು ಕಲಿಸುತ್ತಿದ್ದ ಇನಾಯತ್ ಖಾನ್‌ಗೆ ತನ್ನ ತಾಯ್ನಾಡು ಭಾರತ ತೀವ್ರವಾಗಿ ಕಾಡ ತೊಡಗಿದ್ದೇ ಹೆಂಡತಿ ಮಕ್ಕಳನ್ನು ಬಿಟ್ಟು ಭಾರತಕ್ಕೆ ಮರಳಿಬಿಡುತ್ತಾರೆ. ನೂರಳ ತಾಯಿ ಓರಾರೇ ಬೇಕರ್ ಒಳಗೆ ನೊಂದರೂ ಧೃತಿಗೆಡದೆ ಮಕ್ಕಳನ್ನು ಜವಾಬ್ದಾರಿಯುತ ವ್ಯಕ್ತಿಗಳಾಗಿ, ಕಲಾಸಕ್ತರಾಗಿ ಬೆಳೆಸುವುದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಆದರೆ ಆ 13ರ ಚಿಕ್ಕ ಹರೆಯದಲ್ಲೂ ನೂರ್‌ಗೆ ತಾನು ಈ ಕುಟುಂಬದ ಜವಾಬ್ದಾರಿ ಹೊರಬೇಕು ಎನ್ನುವ ಅರಿವು ಮೂಡುತ್ತದೆ.

ಆರಂಭವಾದ ಎರಡನೇಯ ಮಹಾಯುದ್ಧದಲ್ಲಿ ಬ್ರಿಟನ್ ಸೇನೆಗೆ ಸೇರುವ ಪ್ರಯತ್ನವನ್ನೂ ನೂರ್ ಮಾಡುತ್ತಾಳೆ. ಸಂದರ್ಶನಕ್ಕೆಂದೇ ಅವಳನ್ನು ಕರೆದಾಗ ಇವಳ ಭಾರತೀಯ ಮೂಲವನ್ನು ಗಮನಿಸಿಯೋ ಏನೋ ಅಧಿಕಾರಿ, "ಭಾರತೀಯ ನಾಯಕರು ಬ್ರಿಟನ್‌ಗೆ ಮುಜುಗರ ಉಂಟುಮಾಡುವಂಥ ನಿರ್ಧಾರ ತೆಗೆದುಕೊಂಡರೆ ಅದನ್ನು ನೀನು ಬೆಂಬಲಿಸುತ್ತೀಯಾ?" ಎಂದು ಕೇಳುತ್ತಾನೆ. ಅದಕ್ಕೆ ನೂರ್ ಕೊಡುವ ಉತ್ತರ, "ಜರ್ಮನಿ ವಿರುದ್ಧದ ಯುದ್ಧ ಮುಗಿಯುವ ವರೆಗೂ ನಾನು ಬ್ರಿಟನ್‌ಗೆ ನಿಷ್ಠಳು. ನಂತರ ಭಾರತದಲ್ಲಿ ಪರಿಸ್ಥಿತಿ ಹೀಗೆ ಮುಂದುವರೆದಿದ್ದರೆ ಬ್ರಿಟನ್ ವಿರುದ್ಧ ಇಂಡಿಯಾವನ್ನು ಬೆಂಬಲಿಸುತ್ತೇನೆ" ಎಂದು. ನೂರ್‌ಳ ಈ ಉತ್ತರವನ್ನು ಸತ್ಯನಿಷ್ಠುರತೆ ಎಂದು